ದಿನಾಂಕಃ 24/11/2022 ರಂದು ಸಾಕ್ಷಿಯನ್ನು ಪುನಃ ಕರೆಸಿಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಾಯ್ ಬಿ ಬಿ ವಕೀಲರಿಂದಃ**

2. ನನಗೆ ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಪೊಲೀಸರಿಗೆ ನಾನೇ ಹೇಳಿಕೆ ನೀಡಿರುತ್ತೇನೆ. ಪೊಲೀಸರಿಗೆ ನೀಡಿರುವ ಹೇಳಿಕೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಆರೋಪಿ ಬ್ಯಾಂಕಿನಲ್ಲಿ ಸುಮಾರು 4 ವರ್ಷಗಳಿಂದ ಕೆಲಸ ಮಾಡಿರಬಹುದು. ನನಗೆ ಆರೋಪಿಯ ಜೊತೆ ಒಡನಾಟ ಇರಲಿಲ್ಲ. ಕೆವಿಜಿ ಬ್ಯಾಂಕಿನಲ್ಲಿ ನನ್ನ ಉಳಿತಾಯ ಖಾತೆ ಹೊಂದಿರುತ್ತೇನೆ. ಸದರಿ ಖಾತೆಯ ನಂಬರ ನನಗೆ ಹೇಳಲು ಆಗುವುದಿಲ್ಲ. ಉಳಿತಾಯ ಖಾತೆಯನ್ನು ಆರೋಪಿಯ ಅವಧಿಯಲ್ಲಿ ಮಾಡಿಸಿರುತ್ತೇನೆ. ನಾನು ನನ್ನ ಉಳಿತಾಯ ಖಾತೆಯಿಂದ ಹಣ ಜಮಾ ಮಾಡುವುದು ಮತ್ತು ತೆಗೆಯುವುದು ಮಾಡುತಿದ್ದ ಎಂದರೆ ಸರಿಯಲ್ಲ.ನನ್ನ ಉಳಿತಾಯ ಖಾತೆಯ ಪಾಸ್ ಪುಸ್ತಕವನ್ನು ಪೊಲೀಸರಿಗೆ ನೀಡಿದ್ದು ನೆನೆಪಿಲ್ಲ. ನನ್ನ ಹೆಸರಿನಲ್ಲಿ ಈಗ ಬೆಳೆ ಸಾಲ ಇರುವುದಿಲ್ಲ. ಹಿಂದೆ ನನಗೆ ಬೆಳೆ ಸಾಲ ಇರಲಿಲ್ಲ. ನಮ್ಮ ಕುಟುಂಬಕ್ಕೆ 9 ಎಕರೆ ನಮ್ಮ ತಂದೆಯ ಹೆಸರಿಲ್ಲಿ ಜಮೀನು ಇರುತ್ತದೆ. ಸದರಿ ಜಮೀನಿನ ಮೇಲೆ ನಮ್ಮ ತಂದೆಯ ಹೆಸರಿನಲ್ಲಿ ಬೆಳೆಸಾಲ ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರ ಬೆಳೆ ಸಾಲ ಪಡೆದಿರುವ ಬಗ್ಗೆ ನನಗೆ ಗೊತಿದ್ದರು ಸಹ ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಜೊತೆ ಬೆಳೆ ಸಾಲ ತೆಗೆಯಲು ಮತ್ತು ತುಂಬಲು ನಾನು ಜೊತೆಯಲ್ಲಿ ಹೋಗುತಿದ್ದೆ ಎಂದರೆ ಸರಿಯಲ್ಲ. ಬೆಳೆ ಸಾಲ ಪಡೆಯಲು ಬ್ಯಾಂಕಿನ ಯಾವ ನಿಯಮಗಳು ಇವೆ ಎಂದು ನನಗೆ ಗೊತ್ತಿಲ್ಲ.ಬೆಳೆ ಸಾಲ ಪಡೆಯುವ ಸಮಯದಲ್ಲಿ ಜಮೀನಿನ ಉತಾರ, ಡ ಖಾತಾ ಉತಾರ, ಯಾವುದೇ ಬ್ಯಾಂಕಿನಲ್ಲಿ ಬೆಳೆ ಸಾಲ ಇಲ್ಲ ಎಂಬ ಹಿಂಬರಹ ನೀಡಿದರೆ ಮಾತ್ರ ಬೆಳೆ ಸಾಲ ಮಂಜೂರು ಮಾಡುತ್ತಾರೆ ಎಂದರೆ ಸರಿ. ಬೆಳೆಸಾಲ ಮಂಜೂರಾದ ನಂತರ ಬ್ಯಾಂಕಿನವರು ಒಪ್ಪಂದ ಪತ್ರಕ್ಕೆ ಸಾಲಗಾರರ ಸಹಿ ಪಡೆಯುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಅದರಂತೆ ಜಾಮೀನುದಾರರ ಸಹಿ ಸಹ ಪಡೆಯುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

3. ನಮ್ಮ ಕುಟುಂಬದ ಜಮೀನು ನನ್ನ ಹೆಸರಿನಲ್ಲಿರುತ್ತದೆ. ನನ್ನ ಹೆಸರಿಗೆ 3 ಎಕರೆಗಿಂತ ಕಡಿಮೆ ಜಮೀನು ಹೊಂದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಗೊತ್ತು. ಬ್ಯಾಂಕಿನಲ್ಲಿ ಅವ್ಯವಹಾರ ಆಗಿರುವ ವಿಚಾರ ನನಗೆ ಬ್ಯಾಂಕಿನಿಂದ ನೋಟಿಸ್ಸು ಬಂದಾಗ ತಿಳಿಯಿತು. ನನಗೆ ನೋಟಿಸ್ಸು ಬರುವ ಪೂರ್ವದಲ್ಲಿ ಬ್ಯಾಂಕಿನಲ್ಲಿ ಅವ್ಯವಹಾರ ಆಗಿದೆ ಎಂದು ನನಗೆ ಗೊತ್ತಿರಲಿಲ್ಲ. ನಾನು ಧಾರವಾಡದ ಬ್ಯಾಂಕಿನ ಕೇಂದ್ರ ಕಚೇರಿಗೆ ಅವ್ಯವಹಾರದ ಬಗ್ಗೆ ಹೋಗಿರುವುದಿಲ್ಲ. ಆದರೆ ನಮ್ಮ ತಂದೆಯವರು ಹೋಗಿರುತ್ತಾರೆ. ಅವ್ಯವಹಾರದ ಬಗ್ಗೆ ನಮ್ಮ ಊರಿನಲ್ಲಿ ಬೇರೆಯವರಿಗೆ ನೋಟಿಸ್ಸು ಬಂದಿರುವುದಿಲ್ಲ ನನಗೆ ಗೊತ್ತಿಲ್ಲ. ಈ ರೀತಿ ಅವ್ಯವಹಾರವಾಗಿದೆ ಎಂದು ನಾನು

ನಮ್ಮ ಊರಿನ ಹಿರಿಯರಿಗೆ ತಿಳಿಸಿಲ್ಲ. ನಾನು ಅವ್ಯವಹಾರದ ಬಗ್ಗೆ ಬ್ಯಾಂಕಿಗೆ ಹೋಗಿ ಲಿಖಿತ ದೂರು ನೀಡಿದೆ. ಸದರಿ ದೂರನ್ನು ನಮ್ಮ ಊರಿನ ಬ್ಯಾಂಕಿನಲ್ಲಿ ಕೊಟ್ಟಿರುತ್ತೇನೆ. ಸದರಿ ದೂರು ನೀಡಿದ ಬಗ್ಗೆ ಸ್ವೀಕೃತಿ ಪಡೆದಿರುವುದು ನೆನೆಪಿಲ್ಲ. ಸದರಿ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ದೂರನ್ನು ನನ್ನ ಸಹೋದರ ಬರೆದಿರುತ್ತಾನೆ. ಆ ದೂರಿಗೆ ನಾನು ಸಹಿ ಮಾಡಿರುತ್ತೇನೆ. ನಾನು ಕೆವಿಜಿ ಬ್ಯಾಂಕಿಗೆ ವಿಚಾರಣೆ ಹೋದಾಗ ನನಗೆ ಲಿಖಿತ ದೂರನ್ನು ಕೊಡುವಂತೆ ತಿಳಿಸಿದ ಮೇರೆಗೆ ನಾನು ಲಿಖಿತ ದೂರನ್ನು ಕೊಟ್ಟಿರುತ್ತೇನೆ ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ದೂರು ನನ್ನ ಸಹೋದರ ಬರೆದಿದ್ದ ದೂರು ಆಗಿರುತ್ತದೆ.

4. ನಾನು ನನ್ನ ಸಹಿಯನ್ನು ಆಂಗ್ಲದಲ್ಲಿ ಮಾಡುತ್ತೇನೆ. ನಮ್ಮ ತಂದೆಯಿಂದ ನನಗೆ ಜಮೀನು ಬಂದ ನಾನು ಬೆಳೆ ಸಾಲ ಪಡೆಯಲು ಬ್ಯಾಂಕಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ನನಗೆ ಬೆಳೆ ಸಾಲಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ತರುವಂತೆ ತಿಳಿಸಿದರು ಎಂದರೆ ಸರಿಯಲ್ಲ. ನಾನು ಅದರಂತೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದಾಖಲೆಗಳನ್ನು ಪರಿಶೀಲಿಸಿ ನನಗೆ ರೂ 60,000/ ಬೆಳೆ ಸಾಲ ಮಂಜೂರು ಮಾಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಬ್ಯಾಂಕಿನ ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಚಿಕ್ಕಗುಂಜಳದ ಬಸವರಾಜ ಚೆನ್ನಬಸಪ್ಪ ಸಂಕ್ಲೀಪುರರವರನ್ನು ನಾನೇ ಕರೆಯಿಸಿ ಜಾಮೀದಾರರಾಗಿ ಸಹಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಮಂಜೂರಾದ ಬೆಳೆ ಸಾಲವನ್ನು ನಾನೇ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಬೆಳೆ ಸಾಲ ಪಡೆದಿಲ್ಲ ಮತ್ತು ಮರುಪಾವತಿ ಮಾಡಿಲ್ಲ. ನಾನು ಬ್ಯಾಂಕಿನಿಂದ ಯಾವುದೇ ಬೆಳೆ ಸಾಲ ಇರುವುದಿಲ್ಲ ಎಂದು ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ದಿಃ08/08/2012 ರಂದು ರೂ 60,000/ ಬೆಳೆ ಸಾಲವನ್ನು ಪಡೆದಿದ್ದು, ಸದರಿ ಸಾಲ ದಿಃ19/11/2015 ರ ವರೆಗೆ ರೂ 90,304/ ಬಾಕಿ ಇದ್ದು, ಅದನ್ನು ನಾನೇ ಮರುಪಾವತಿಸಿ ಮುಕ್ತಾಯ ಮಾಡಿ, ಸಾಲ ಇಲ್ಲ ಎಂದು ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬೆಳೆ ಸಾಲ ಪಡೆಯುವ ಸಮಯದಲ್ಲಿ ರೂ 400/ ಬ್ಯಾಂಕಿನ ಖರ್ಚು ವೆಚ್ಚಗಳಿಗೆ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ19/11/2015 ರಂದು ನನ್ನ ಸಾಲದ ಖಾತೆ ಮುಕ್ತಾಯವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ನಾನು ಕೇಳಿದಷ್ಟು ಬೆಳೆ ಸಾಲ ನೀಡದೇ ಕೇವಲ ರೂ 60,000/ ನೀಡಿದ್ದರಿಂದ ಮತ್ತು ನನಗೆ ಸಾಲ ಮರುಪಾವತಿ ಮಾಡುವಂತೆ ಒತ್ತಾಯ ಮಾಡಿದ್ದರಿಂದ ನಾನು ಆರೋಪಿತನ ಮೇಲೆ ಸಿಟ್ಟಾಗಿ

ಪೊಲೀಸರ ಮಾತು ಕೇಳಿ ಸುಳ್ಳು ಹೇಳಿಕೆ, ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ24-11-2022 ರಂದು ಮ. 12ಃ30 ರಿಂದ 12ಃ47 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.